ದಿನಾಂಕ ಃ **30-01-2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಃ- ಪ್ರತಿವಾದಿಯ ಪರ ಶ್ರೀ. ಎಂ.ಎನ್, ವಕೀಲರಿಂದ ಃ-**

**8.** ಕಳೆದ ಬಾರಿ ನಿಮ್ಮ ಮುಖ್ಯ ವಿಚಾರಣೆಯಲ್ಲಿ ಪೂರ್ವ ಮತ್ತು ಉತ್ತರಕ್ಕೆ **10** ಅಡಿ ರಸ್ತೆ ಇದೆ ಎಂದು ಹೇಳಿದ್ದು, ಅದು ಎಷ್ಟು ಉದ್ದ ಇರುತ್ತದೆ ಎಂದರೆ ಸಾಕ್ಷಿಯು **250** ಅಡಿ ರಸ್ತೆ ಮಾರ್ಗ ಇರುತ್ತದೆ ಅದರಲ್ಲಿ ಅರ್ಧ ನನ್ನ ಜಮೀನು ಇರುತ್ತದೆ ಇನ್ನುಳಿದ ಉತ್ತರ ದಕ್ಷಿಣ ಬೇರೆಯವರ ಜಮೀನಿನಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಪೂರ್ವ ಪಶ್ಚಿಮಕ್ಕೆ ನಿಮ್ಮ ಜಮೀನಿನಲ್ಲಿ ಎಷ್ಟು ಅಡಿ ರಸ್ತೆ ಇರುತ್ತದೆ ಎಂದರೆ ಸಾಕ್ಷಿಯು ಅಂದಾಜು **150** ಅಡಿ ಇರುತ್ತದೆ ಎಂದು ನುಡಿಯುತ್ತಾರೆ. ನೀವು ಅದನ್ನು ಅಳತೆ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ರಸ್ತೆಯನ್ನು ಸೇರಿಸಿ ಈ ದಾವೆಯನ್ನು ಹೂಡಿರುತ್ತೀರಿ ಎಂದರೆ ಸರಿ. ರಸ್ತೆ ಇದೆ ಎಂದು ನಿಮ್ಮ ವಾದಪತ್ರದಲ್ಲಿ ಹೇಳಿಲ್ಲ ಎಂದರೆ ಸಾಕ್ಷಿಯು ಹೇಳಿಲ್ಲ ಎಂದು ನುಡಿಯುತ್ತಾರೆ. ದಾವಾಸ್ವತ್ತಿನ **34** ಗುಂಟೆ ಜಮೀನು ಒಂದೇ ಫ್ಲಾಟ್ ನಲ್ಲಿ ಬರುತ್ತದಾ ಅಥವಾ ಬೇರೆ ಬೇರೆ ಬರುತ್ತದಾ ಎಂದರೆ ಸಾಕ್ಷಿ ಒಂದೇ ಫ್ಲಾಟ್ ನಲ್ಲಿ ಬರುತ್ತದೆ ಎಂದು ನುಡಿಯುತ್ತಾರೆ. ಸದರಿ ಒಂದೇ ಫ್ಲಾಟ್ ನ ಚೆಕ್ಕುಬಂಧಿ ಹೇಳಲು ಆಗುತ್ತಾದಾ ಎಂದರೆ ಪೂರ್ವಕ್ಕೆ ದುರ್ಗಪ್ಪನ ಮಗ ಬ್ಯಾಟರಾಜು, ಪಶ್ಚಿಮಕ್ಕೆ ನಮ್ಮದೇ ಸರ್ವೆ ನಂ. **82/6** ಬಿ ಸ್ವತ್ತು, ಉತ್ತರಕ್ಕೆ ನಮ್ಮದೇ ಸರ್ವೆ ನಂ. **79/5** ಬಿ ಸ್ವತ್ತು, ದಕ್ಷಿಣಕ್ಕೆ ಗ್ರಾಮ ಠಾಣಾಕ್ಕೆ ಸೇರಿದ ಮನೆಗಳು ಎಂದು ನುಡಿಯುತ್ತಾರೆ. ನೀವು

ಹೇಳಿರುವ ಚೆಕ್ಕುಬಂಧಿಯಲ್ಲಿ ಪೂರ್ವಕ್ಕೆ ಮತ್ತು ಉತ್ತರಕ್ಕೆ ರಸ್ತೆ ಇದೆ ಎಂದರೆ ಸಾಕ್ಷಿ ಅದು ಅನುಮತಿ ಮೇರೆಗೆ ಮಾಡಿರುವ ರಸ್ತೆ ಎಂದು ಹೇಳುತ್ತಾರೆ. ಸದರಿ ರಸ್ತೆಯನ್ನು ನಿಮ್ಮ ಚೆಕ್ಕುಬಂಧಿಯಲ್ಲಿ ತೋರಿಸಿಲ್ಲ ಎಂದರೆ ಸರಿ. **1** ನೇ ಪ್ರತಿವಾದಿ ನಿಮಗೆ ಗೊತ್ತಾ ಎಂದರೆ ಗೊತ್ತು ಎಂದು ನುಡಿಯುತ್ತಾರೆ. **1** ನೇ ಪ್ರತಿವಾದಿಗೆ ಮನೆ ಮತ್ತು ಖಾಲಿ ಜಾಗ ಇರುತ್ತದೆ ಎಂದರೆ ಸಾಕ್ಷಿ ಮನೆ ಇರತ್ತದೆ ಖಾಲಿ ಜಾಗ ಇಲ್ಲ ಎಂದು ನುಡಿಯುತ್ತಾರೆ. **1** ನೇ ಪ್ರತಿವಾದಿಯವರಿಗೆ ಸೇರಿದ ಮನೆ ಗ್ರಾಮ ಠಾಣಾದ ಯಾವ ಸರ್ವೆ ನಂಬರ್ ಗೆ ಸೇರಿದ್ದು ಎಂದರೆ ಸಾಕ್ಷಿ ನನಗೆ ಸರ್ವೆ ನಂಬರ್ ಗೊತ್ತಿಲ್ಲ ಎಂದು ನುಡಿಯುತ್ತಾರೆ. **1** ನೇ ಪ್ರತಿವದಿಾಯವರ ಮನೆಯ ಚಕ್ಕುಬಂಧಿ ಪೂರ್ವಕ್ಕೆ ರಂಗಯ್ಯನವರ ಹಿಸ್ಸೆ ಖರಾಬು ಜಮೀನು, ಪಶ್ಚಿಮಕ್ಕೆ- ಗ್ರಾಮದ ರಸ್ತೆ, ಉತ್ತರಕ್ಕೆ- ಶಿವಣ್ಣ ಹಾಗೂ ರಾಜಮ್ಮನವರ ಮನೆ, ದಕ್ಷಿಣಕ್ಕೆ - ಶಿವರಾಮಯ್ಯನವರ ಮನೆ ಇರುತ್ತದೆ. **1** ನೇ ಪ್ರತಿವಾದಿಯವರ ಮನೆಯ ಹಿಂಭಾಗ ಹಿತ್ತಲು ಇರುತ್ತದೆ ಎಂದರೆ ಸರಿಯಲ್ಲ.

**9.** ದಾವಾಸ್ವತ್ತಿನ ಅಕ್ಕಪಕ್ಕದಲ್ಲಿ **1** ನೇ ಪ್ರತಿವಾದಿಗೆಯವರಿಗೆ ಸೇರಿದ ಸ್ವತ್ತು ಇರುತ್ತದಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಈ ದಾವೆಯನ್ನು ಪ್ರತಿವಾದಿಗಳ ವಿರುದ್ಧ ಯಾವ ಕಾರಣಕ್ಕಾಗಿ ಹೂಡಿರುತ್ತೀರಿ ಎಂದರೆ ಸಾಕ್ಷಿಯು ಪ್ರತಿವಾದಿಗಳು ನಮ್ಮ ಜಮೀನನ್ನು ಸೇರಿಸಿ ಬರೆಸಿಕೊಂಡು ಗೂಂಡಾವರ್ತನೆ ಮಾಡಿರುವುದರಿಂದ ಈ ದಾವೆಯನ್ನು ಹೂಡಿರುತ್ತೇವೆ ಎಂದು ನುಡಿಯುತ್ತಾರೆ. ಯಾವ ವರ್ಷದಲ್ಲಿ ಪತ್ರವನ್ನು ಬರೆಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.ಪ್ರತಿವಾದಿಗಳು ಯಾರಿಂದ ಪತ್ರವನ್ನು ಬರೆಸಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಕೊಲಮ್ಮನವರಿಂದ ಪತ್ರವನ್ನು

ಬರೆಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಖರಾಬು ಜಮೀನಿನಲ್ಲಿ ಪ್ರತಿವಾದಿಗಳು ಮನೆ ಕಟ್ಟಿಕೊಂಡು ವಾಸವಿರುತ್ತಾರೆ ಎಂದರೆ ಸಾಕ್ಷಿ ಅದು ಖಾಲಿ ಇರುತ್ತದೆ ಮತ್ತು ನಾವು ಅಲ್ಲಿ ಹೋಗಿರುವುದಿಲ್ಲ ಅವರು ಸಹ ಅಲ್ಲಿ ಹೋಗಿರುವುದಿಲ್ಲ ಎಂದು ನುಡಿಯುತ್ತಾರೆ.

**10.** ದಾವಾಸ್ವತ್ತಿನ ಖಾರಾಬು **7** ಗುಂಟೆ ಯ ಚೆಕ್ಕುಬಂಧಿ ಪೂರ್ವಕ್ಕೆ ತಿಮ್ಮಯ್ಯನವರ ಕುಟುಂಬದವರು ಮತ್ತು ದುರ್ಗಪ್ಪನವರ ಮಗ ಬ್ಯಾಟರಾಜುರವರ ಕುಟುಂಬದವರು, ಪಶ್ಚಿಮಕ್ಕೆ-ಕೂರ್ಲಯ್ಯನವರ ಮಗ ಶಿವರಾಮಯ್ಯನವರ ಮನೆ, ಪರ್ಸಯ್ಯನವರ ಮಗ ರಾಮಯ್ಯನವರ ಮನೆ, ಶಿವಣ್ಣ ರಾಜಮ್ಮನವರ ಮನೆ, ದುರ್ಗಪ್ಪ ಶಿವಮ್ಮನವರ ಮನೆ, ಉತ್ತರಕ್ಕೆ- ನಮ್ಮದೇ ಸ್ವತ್ತು ಸರ್ವೆ ನಂ. **82/6** ಸಿ **34** ಗುಂಟೆ ಹೈನು ಜಮೀನು, ದಕ್ಷಿಣಕ್ಕೆ- ಚಲುವರಂಗಯ್ಯನವರ ಹೆಂಡತಿ ಜಯಮ್ಮನವರ ಮನೆ, ನಮ್ಮದೇ ಮನೆ ಇರುತ್ತದೆ. ಖರಾಬಿನ ಯಾವ ದಿಕ್ಕಿಗೆ ರಸ್ತೆ ಇರುತ್ತದೆ ಎಂದರೆ ಉತ್ತರಕ್ಕೆ ಮತ್ತು ಪೂರ್ವಕ್ಕೆ ರಸ್ತೆ ಇರುತ್ತದೆ ಎಂದು ನುಡಿಯುತ್ತಾರೆ. ಪಶ್ಚಿಮ ದಿಕ್ಕಿಗೆ ಹೇಳಿರುವಂತಹ ಪರ್ಸಯ್ಯನವರ ಮಗ ರಾಮಯ್ಯನವರ ಮನೆ ಎಂದರೆ ಪ್ರತಿವಾದಿಗಳು ಎಂದರೆ ಸರಿ. ನಿಮ್ಮ ಪ್ರಕಾರ ಖರಾಬು ರಾಮಯ್ಯನವರ ಮನೆಯ ಪೂರ್ವಕ್ಕೆ ಇರುತ್ತದೆ ಎಂದರೆ ಸರಿ. ನೀವು ರಸ್ತೆಯನ್ನು ಬಿಟ್ಟಿರುವ ಪೂರ್ವಕ್ಕೆ ಖರಾಬು ಬರುತ್ತದೆ ಎಂದರೆ ಸರಿ. ಅದಾದ ನಂತರ ನೀವು ಹೇಳುತ್ತಿರುವ ಪೂರ್ವಕ್ಕೆ ಹೈನು ಜಮೀನು ಬರುತ್ತದೆ ಎಂದರೆ ಸರಿ. ನೀವು ನಿಮ್ಮ ವಾದಪತ್ರದಲ್ಲಿ **17** ಗುಂಟೆ ಭಾಗ ಪತ್ರದ ಮೂಲಕ ಬಂದಿದ್ದು ಮತ್ತು ಇನ್ನೂ ಉಳಿದ **17** ಗುಂಟೆ ನಾವು ನಮ್ಮ ಚಿಕ್ಕಪ್ಪನವರಿಂದ ಖರೀದಿ ಮಾಡಿರುತ್ತೇವೆ ಎಂದು ಹೇಳಿದ್ದು, ಸದರಿ ಭಾಗ ಪತ್ರವನ್ನು ನ್ಯಾಯಾಲಯಕ್ಕೆ

ಹಾಜರುಪಡಿಸುತ್ತೀರಾ ಎಂದರೆ ಸಾಕ್ಷಿ ನಾವು ಜುಬಾನೀ ವಿಭಾಗ ಮಾಡಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ನಿಮ್ಮ ವಾದಪತ್ರದಲ್ಲಿ ಜುಬಾನೀ ವಿಭಾಗ ಮಾಡಿಕೊಂಡಿರುತ್ತೇವೆ ಎಂದು ಹೇಳಿ ಬರೆಸಿಲ್ಲ ಎಂದರೆ ಸರಿ. ಜುಬಾನೀ ವಿಭಾಗ ಯಾವ ವರ್ಷದಲ್ಲಿ ಆಗಿರುತ್ತದೆ ಎಂದರೆ ಸಾಕ್ಷಿ **1978** ನೇ ಇಸವಿಯಲ್ಲಿ ಆಗಿರುತ್ತದೆ ಎಂದು ನುಡಿಯುತ್ತಾರೆ. ನಿಮ್ಮ ಕುಟುಂಬದಲ್ಲಿ **34** ಗುಂಟೆ ಇತ್ತು ಎಂದು ತೋರಿಸಲು ಯಾವುದೇ ದಾಖಲಾತಿ ನೀಡಿಲ್ಲ ಎಂದರೆ ಸಾಕ್ಷಿ ಕ್ರಯಪತ್ರ, ಪಹಣಿ ನೀಡಿರುತ್ತೇವೆ ಎಂದು ನುಡಿಯುತ್ತಾರೆ.

**11.** ನಿಪಿ-**4** ಮ್ಯುಟೇಶನ್ ನ್ನು ನೀವು ತಿದ್ದಿರುವ ಪ್ರತಿಯನ್ನು ನೀಡಿರುತ್ತೀ ರಿ ಎಂದರೆ ಸಾಕ್ಷಿ ಅದು ಗ್ರಾಮ ಲೆಕ್ಕಾಧಿಕಾರಿಗಳು ತಿದ್ದಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-**4** ರಲ್ಲಿ ತಿದ್ದಿರುವ ಬಗ್ಗೆ ಯಾವುದೇ ಸಹಿಯನ್ನು ಅಥವಾ ಸೀಲ್ ನ್ನು ಮಾಡಿರುವುದಿಲ್ಲ ಎಂದರೆ ಸರಿ. ನಿಪಿ-**4** ರಲ್ಲಿ ವಿಸ್ತೀರ್ಣ ಸಹ **24** ಗುಂಟೆ ಇದೆ ಎಂದು ಬರೆದು ಹೊಡೆದು ಹಾಕಿರುತ್ತಾರೆ ಎಂದರೆ ಸರಿ. ನಿಪಿ-**4** ನ್ನು ಈ ದಾವೆಗೋಸ್ಕರ ನೀವು ಬೇರೆಯವರ ಹತ್ತಿರ ಬರೆಸಿ, ತಂದು ಹಾಜರುಪಡಿಸಿರುತ್ತೀರಿ ಎಂದರೆ ಸರಿಯಲ್ಲ. ನಿಪಿ-**5** ಸ್ಕೆಚ್ ನಲ್ಲಿ ಒಂದರಲ್ಲಿ **7** ಗುಂಟೆ ಮತ್ತೊಂದರಲ್ಲಿ **25** ಗುಂಟೆ ಎಂದು ನಮೂದಾಗಿರುತ್ತದೆ ಎಂದರೆ ಸಾಕ್ಷಿ ಇಂತಹ ಸರ್ವೆ ನಂಬರ್ ನಲ್ಲಿ ಇಷ್ಟು ಖರಾಬು ಇರುತ್ತದೆ ಎಂದು ಒಟ್ಟಾಗಿ ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-**5** ಸ್ಕೆಚ್ ನಲ್ಲಿ ಹೈನು ಎಷ್ಟು ಗುಂಟೆ ಹಾಗೂ ಖರಾಬು ಎಷ್ಟು ಗುಂಟೆ ಎಂದು ಬರೆದಿದೆ ಎಂದರೆ ಸಾಕ್ಷಿ ಹೈನು ನಿಪಿ-**5** ರಲ್ಲಿ ಲೆಕ್ಕ ತೋರಿಸಿರುವುದಿಲ್ಲ ಹಾಗೂ ಖರಾಬು **7** ಗುಂಟೆ ಎಂದು ನುಡಿಯುತ್ತಾರೆ. ಯಾವುದೇ ಅಳತೆ ಹಾಗೂ ಸ್ಕೆಚ್ ಮಾಡಿದರೆ ಹೈನು ಎಷ್ಟು ಖರಾಬು ಎಷ್ಟು ನಮೂದು ಮಾಡುತ್ತಾರೆ ಎಂದರೆ ಸಾಕ್ಷಿ ಅವರು

ನಮೂದು ಮಾಡಿಲ್ಲ ಎಂದು ನುಡಿಯುತ್ತಾರೆ. ನಿಪಿ-5 ರಲ್ಲಿ ಅಂಕು ಎಂದು ಇದ್ದು ಅಂಕು ಎಂದರೆ ಏನು ಎಂದರೆ ಸಾಕ್ಷಿ ಸಾಗುವಳಿ ಎಷ್ಟು ಬರುತ್ತದೆ ಎಂದು ನಮೂದಿಸಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-5 ರಲ್ಲಿ ಸಾಗುವಳಿಯಲ್ಲಿ ಸರ್ವೆ ನಂ. 6 ಎ ರಲ್ಲಿ 12 ಗುಂಟೆ, 6 ಬಿ ನಲ್ಲಿ 10 ಗುಂಟೆ, 6 ಸಿ ನಲ್ಲಿ 7 ಗುಂಟೆ ನಮೂದಾಗಿರುತ್ತದೆ ಎಂದರೆ ಸರಿ.

**11.** ನಿಪಿ-7 ಕ್ರಯಪತ್ರದಲ್ಲಿ ವಿಭಾಗದಿಂದ ಬಂದಂತಹ ಆಸ್ತಿಯನ್ನು ಕ್ರಯ ಮಾಡಿರುತ್ತೇವೆ ಎಂದು ನಮೂದು ಮಾಡಿಲ್ಲ ಎಂದರೆ ಸಾಕ್ಷಿ ನಮೂದು ಆಗಿರುತ್ತದೆ ಎಂದು ನುಡಿಯುತ್ತಾರೆ. ಆಕಾರ್ ಬಂದ್ ನಲ್ಲೂ ಸಹ ಖರಾಬು 7 ಗುಂಟೆ ಇದೆ ಎಂದು ನಮೂದಾಗಿಲ್ಲ ಎಂದರೆ ಸರಿ. ನೀವು ಹಾಜರುಪಡಿಸಿರುವ ಪಹಣಿಗಳಲ್ಲೂ ಸಹ ಖರಾಬು ನಮೂದಾಗಿಲ್ಲ ಎಂದರೆ ಸರಿ. ನಿಮ್ಮ ಕುಟುಂಬಕ್ಕೆ 34 ಗುಂಟೆ ಇತ್ತು ಎಂದು ಎಂದಾದರೂ ಅಳತೆ ಮಾಡಿಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಆ ಬಗ್ಗೆ ಮೂಲ ದಾಖಲಾತಿಗಳನ್ನು ಸಹ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಕ್ರಯಪತ್ರ ಮತ್ತು ಪಹಣಿ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಕ್ರಯಪತ್ರದಲ್ಲಿ 17 ಗುಂಟೆ ಮಾತ್ರ ನಮೂದಗಿರುತ್ತದೆ ಎಂದರೆ ಸಾಕ್ಷಿ ಉಳಿದ ಭಾಗ ನನ್ನ ತಂದೆಯವರಿಗೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ಸದರಿ 17 ಗುಂಟೆ ನಿಮ್ಮ ತಂದೆಯವರಿಗೆ ಬಂದಿತ್ತು ಎಂದು ತೋರಿಸಲು ಯಾವುದೇ ದಾಖಲಾತಿಯನ್ನು ನೀಡಿಲ್ಲ ಎಂದು ಸಾಕ್ಷಿ ಪಹಣಿಯನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ದಾವಾ ಹೂಡುವ ಮೊದಲು ಸ್ವತ್ತನ್ನು ಅಳತೆ ಮಾಡಿಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ನ್ಯಾಯಾಲಯದಿಂದ ನಿಯೋಗಿಯನ್ನು ನೇಮಕ ಮಾಡಿ ಅಳತೆ ಮಾಡಿಸಲು ನಿಮಗೆ ತೊಂದರೆ ಇದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನೀವು ಸುಳ್ಳು ಚೆಕ್ಕುಬಂಧಿಯನ್ನು, ಸುಳ್ಳು ವಿಸ್ತೀರ್ಣ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಕೊಳ್ಳಮ್ಮನಿಂದ ಪ್ರತಿವಾದಿಗಳು ಕ್ರಯಕ್ಕೆ ಪಡೆದುಕೊಂಡಿರುವ ಪತ್ರವನ್ನು ಪ್ರಶ್ನಿಸಿರುತ್ತೀರಾ ಎಂದರೆ ಸಾಕ್ಷಿ ನನ್ನ ಅಜ್ಜಿಯವರ ಕಾಲದಿಂದಲೂ ಸಹ ಪ್ರತಿವಾದಿಗಳು ನಮ್ಮದು ಜಮೀನು ಎಂದು ಗೂಂಡಾ ವರ್ತನೆ ಮಾಡುತ್ತಿದ್ದಾರೆ ನಾನು ಸದರಿ ಪತ್ರವನ್ನು ಪರಿಶೀಲನೆ ಮಾಡಿಲ್ಲ ಎಂದು ನುಡಿಯುತ್ತಾರೆ. ಎಷ್ಟು ವರ್ಷದಿಂದ ನಮ್ಮದು ಜಮೀನು ಎಂದು ಗೂಂಡಾವರ್ತನೆ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ **40** ವರ್ಷಗಳಿಂದ ಈ ರೀತಿ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ.

**12.** ನನ್ನ ಅಜ್ಜಿ ಮತ್ತು ನನ್ನ ಚಿಕ್ಕಪ್ಪನ ಚಲುವಯ್ಯನವರು ನನ್ನ ತಂದೆಗೆ ಕ್ರಯಪತ್ರ ಮಾಡಿಕೊಟ್ಟಿರುತ್ತಾರೆ. ಸದರಿ ಕ್ರಯಪತ್ರವನ್ನು ನ್ಯಾಯಾಲಯಕ್ಕೆ ನೀಡಿರುತ್ತೀರಾ ಎಂದರೆ ಸಾಕ್ಷಿ ನೀಡಿದ್ದೇನೆ ಎಂದು ನುಡಿಯುತ್ತಾರೆ. ನಿಮ್ಮ ಅಜ್ಜಿಯವರು **1** ನೇ ಪ್ರತಿವಾದಿಯ ತಂದೆಗೆ ಆಗಿರುವ ಕ್ರಯಪತ್ರವನ್ನು ಪ್ರಶ್ನಿಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಯ ತಂದೆಗೆ ಕ್ರಯಪತ್ರ ಆಗಿರುವ ವಿಚಾರ ನಿಮ್ಮ ಅಜ್ಜಿಯವರಿಗೆ ಗೊತ್ತಿತ್ತು ಎಂದರೆ ಸಾಕ್ಷಿ ಅವರಿಗೆ ಗೊತ್ತಿತ್ತೊ ಇಲ್ಲವೋ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಯವರಿಗೆ ಆಗಿರುವ ಸ್ವತ್ತಿಗೆ ನಿಮಗೆ ಯಾವುದೇ ಸ್ವಾಧೀನ ಹಕ್ಕು

ಮಾಲೀಕತ್ವ ಇದೆಯಾ ಎಂದರೆ ಸಾಕ್ಷಿ ಅದು ಪ್ರತಿವಾದಿಗಳಿಗೆ ಬಿಟ್ಟಿರುವ ವಿಚಾರ ಎಂದು ನುಡಿಯುತ್ತಾರೆ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿಯ ಪರ ವಕೀಲರು ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.

ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,

ಅ.ಸಿ.ಜ. ಮತ್ತು ಜೆ.ಎಂ.ಎಫ್.ಸಿ. ಮಾಗಡಿ.